## ಉಪತಹಶೀಲ್ದಾರರ ನ್ಯಾಯಾಲಯ, ನಾಡಕಛೇರಿ, ಕಮಲಾಪುರ,
## ಹೊಸಪೇಟೆ ತಾಲೂಕು-583221.

ಪ್ರ.ವಿಲೇ.ನಂ.ಕಂ/ನಾ.ಕ.ಕ/ಪಹಣಿ/ತಕರಾರು/87/2015-16 ದಿನಾಂಕ: 20.10.2016.

ಉಪಸ್ಥಿತರು: ಉಪತಹಶೀಲ್ದಾರರು,
ನಾಡಕಛೇರಿ, ಕಮಲಾಪುರ.

*****

**ವಾದಿಗಳು ಶ್ರೀ/ಶ್ರೀಮತಿ:**

ಶ್ರೀಮತಿ ಎಸ್.ಹೆಚ್.ಎಂ.ಹೇಮಾವತಿ ಗಂಡ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ, ವಾಸ: ಸ್ಮಯೋರ್ ಕಾಲೋನಿ, ಸಂಡೂರು, ತಾ: ಸಂಡೂರು, ಜಿ: ಬಳ್ಳಾರಿ.

**ಪ್ರತಿವಾದಿಗಳು ಶ್ರೀ/ಶ್ರೀಮತಿ:**

ಶ್ರೀ ಎಸ್.ಹೆಚ್.ಎಂ.ಶಿವಯ್ಯ, ಬಸವೇಶ್ವರ ನಿಲಯ, ಮನೆ ನಂ: 695, 18ನೇ ವಾರ್ಡ್, ಸ್ಮಯೋರ್ ಕಾಲೋನಿ, ಸಂಡೂರು, ತಾ: ಸಂಡೂರು, ಜಿ: ಬಳ್ಳಾರಿ.

**ವ್ಯಾಜ್ಯದ ಜಮೀನು:**

| ತಾಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|
| ಹೊಸಪೇಟೆ | ಕಮಲಾಪುರ | 407/ಎ/2 | 00.40 |
| | | 407/ಬಿ/1 | 01.00 |
| | | 407/ಸಿ1ಎ | 03.63 |
| | | 408/ಬಿ | 00.84 |

**ಪೀಠಿಕೆ:**

ಹೊಸಪೇಟೆ ತಾಲೂಕು, ಕಮಲಾಪುರ ಗ್ರಾಮದ ಸ.ನಂ.407/ಎ/2 ವಿಸ್ತೀರ್ಣ: 00 ಎಕರೆ 40 ಸೆಂಟ್ಸ್; ಸ.ನಂ: 407/ಬಿ/1 ವಿಸ್ತೀರ್ಣ 01 ಎಕರೆ 00 ಸೆಂಟ್ಸ್; ಸ.ನಂ: 407/ಸಿ1ಎ ವಿಸ್ತೀರ್ಣ 03 ಎಕರೆ 63 ಸೆಂಟ್ಸ್ ಮತ್ತು ಸ.ನಂ: 408/ಬಿ ವಿಸ್ತೀರ್ಣ 00 ಎಕರೆ 84 ಸೆಂಟ್ಸ್ ಎಲ್ಲಾ ಜಮೀನುಗಳ ಒಟ್ಟು ವಿಸ್ತೀರ್ಣ 05 ಎಕರೆ 87 ಸೆಂಟ್ಸ್ ಜಮೀನನ್ನು ಸಂಡೂರು ತಾಲೂಕಿನ ಸಂಡೂರು ಗ್ರಾಮದ ಸ್ಮಯೋರ್ ಕಾಲೋನಿಯ ನಿವಾಸಿಯಾದ ವಾದಿಯವರು ತನ್ನ ಪತಿ ಶ್ರೀ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ ಇವರು ದಿನಾಂಕ: 24.04.2016ರಂದು ನಿಧನರಾದ ಪ್ರಯುಕ್ತ ಪೌತಿ ವಾರಸ ಪ್ರಕಾರ ಮೇಲ್ಕಾಣಿಸಿದ ವ್ಯಾಜ್ಯದ ಜಮೀನುಗಳನ್ನು ಹಕ್ಕುಬದಲಾವಣೆ ಮಾಡುವಂತೆ ದಿನಾಂಕ: 25/26.05.2016 ಮೂಲಕ ಕೋರಿರುತ್ತಾರೆ. ಅದರಂತೆ, ಹಕ್ಕುಬದಲಾವಣೆ ಸಂಖ್ಯೆ:ಹೆಚ್120/2015-16 ರನ್ವಯ ಪ್ರಕ್ರಿಯೆ ಜರುಗಿಸಲಾಗಿರುತ್ತದೆ. ಈ ಬಗ್ಗೆ ಗ್ರಾಮಲೆಕ್ಕಿಗರು, ಕಮಲಾಪುರ ಇವರು ನಮೂನೆ-21 ರ ನೋಟೀಸನ್ನು ಗ್ರಾಮದಲ್ಲಿ ಪ್ರಚುರಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ, ಸಂಡೂರು ತಾಲೂಕು ಸಂಡೂರು ಗ್ರಾಮ, ಬಸವೇಶ್ವರ ನಿಲಯ, ಮನೆ ನಂ: 695, 18ನೇ ವಾರ್ಡ್, ಸ್ಮಯೋರ್ ಕಾಲೋನಿ ನಿವಾಸಿಯಾದ ಪ್ರತಿವಾದಿ ಶ್ರೀ ಎಸ್.ಹೆಚ್.ಎಂ.ಶಿವಯ್ಯ ಇವರು ತಕರಾರು ಅರ್ಜಿ ಸಲ್ಲಿಸಿರುವುದರಿಂದ, ಸದರಿ ಪ್ರಕರಣವನ್ನು ವಿವಾದಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು, ವಿಚಾರಣೆ ಮಾಡುವುದಕ್ಕಾಗಿ ಉಭಯ ಪಕ್ಷದವರಿಗೂ ನೋಟೀಸ್ ನೀಡಿ ದಿನಾಂಕ: 14.07.2016 ರಂದು ವಿಚಾರಣೆ ನಡೆಸಲಾಯಿತು.

ವಿಚಾರಣೆ ಸಮಯದಲ್ಲಿ, ವಾದಿಯು ದಿನಾಂಕ: 11.08.2016 ರ ಮೂಲಕ ಪೂರಕ ದಾಖಲೆಗಳೊಂದಿಗೆ ಲಿಖಿತ ವಾದವನ್ನು ಸಲ್ಲಿಸುತ್ತಾ, ತನ್ನ ಪತಿ ಹಾಗೂ ವ್ಯಾಜ್ಯದ ಜಮೀನುಗಳ ಮಾಲೀಕರೂ ಆಗಿರುವ ಶ್ರೀ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ ಇವರನ್ನು ಕಾನೂನು ಬದ್ಧವಾಗಿ ವಿವಾಹವಾಗಿರುವ ಬಗ್ಗೆ ವಿವಾಹ ನೋಂದಣಿ ಪತ್ರವನ್ನು ಸಲ್ಲಿಸುತ್ತಾ, ತಮಗೆ ಒಬ್ಬ ಮಗನೂ ಸಹ ಇರುವುದಾಗಿ ತಿಳಿಸಿರುತ್ತಾರೆ. ಆದರೆ, ತನ್ನ ಪತಿಯು ದಿನಾಂಕ:

ಏತನ್ಮಧ್ಯೆ, ಪ್ರತಿವಾದಿ ಪರವಾಗಿ ಶ್ರೀ ಕೆ.ಪ್ರಭಾಕರ್ ರಾವ್, ವಕೀಲರು, ಹೊಸಪೇಟೆ ಇವರು ವಕಾಲತ್ತನ್ನು ಸಲ್ಲಿಸುತ್ತಾ, ಲಿಖಿತ ತಕರಾರನ್ನು ಸಹ ಸಲ್ಲಿಸಿರುತ್ತಾರೆ. ಸದರಿಯವರ ಪ್ರಕಾರ ವ್ಯಾಜ್ಯದ ಜಮೀನುಗಳು ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಸದರಿ ಜಮೀನುಗಳನ್ನು ಪ್ರತಿವಾದಿಯವರು ತಮ್ಮ ಮಗನಾಗಿರುವ ವಾದಿಯ ಪತಿಯಾದ ಶ್ರೀ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ ಇವರ ಹೆಸರಿನಲ್ಲಿ ಕ್ರಯಕ್ಕೆ ಪಡೆದ ಜಮೀನುಗಳಾಗಿದ್ದು, 2005-06 ನೇ ಸಾಲಿನಲ್ಲಿ ವಾದಿಯ ಪತಿಗೆ ಯಾವುದೇ ಆದಾಯ ಇರಲಿಲ್ಲವೆಂದು ಹಾಗೂ ಪ್ರತಿವಾದಿಯ ಇನ್ನುಳಿದ ಮಕ್ಕಳಾದ ಬಸವರಾಜ ಮತ್ತು ಮಲ್ಲಿಕಾರ್ಜುನ ಇವರು ಸ್ಪಂಜ್ ಪ್ಲ್ಯಾಂಟ್‌ನಲ್ಲಿ ಸೂಪರ್‌ವೈಸರ್ ಆಗಿ ಹಾಗೂ ಜಿಂದಾಲ್ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದರಿಂದ ಇವರ ಸಂಬಳ ಹಾಗೂ ಪ್ರತಿವಾದಿಯು ಸ್ಮಯೋರ್ ಕಂಪನಿಯಲ್ಲಿ ಫೋರ್‌ಮನ್ ಹಾಗೂ ಕ್ವಾಲಿಟಿ ಕಂಟ್ರೋಲರ್ ಆಗಿ 37 ವರ್ಷಗಳ ಸೇವೆ ಸಲ್ಲಿಸಿದ್ದು, ಇದರಿಂದ ಅವರಿಗೆ ಬಂದ ವೇತನ ಮತ್ತು ಇತರ ಆದಾಯಗಳನ್ನು ಸೇರಿಸಿ, ಜಂಟಿ ಕುಟುಂಬದ ವರಮಾನದಿಂದ ಸದರಿ ವ್ಯಾಜ್ಯದ ಜಮೀನುಗಳನ್ನು ಕ್ರಯಕ್ಕೆ ಪಡೆಯಲಾಗಿದೆಯೇ ವಿನ: ಸ್ವತ: ವಾದಿಯ ಪತಿ ಕ್ರಯಕ್ಕೆ ಪಡೆದವುಗಳಲ್ಲವೆಂದು ತಿಳಿಸಿರುತ್ತಾರೆ. ಕಾರಣ, ವ್ಯಾಜ್ಯದ ಜಮೀನುಗಳು ವಾದಿಯ ಪತಿಯು ಸ್ವತ: ಅರ್ಜಿಸಿದ ಆಸ್ತಿಗಳಲ್ಲವೆಂದು ತಿಳಿಸಿರುತ್ತಾರೆ.

ಮುಂದುವರೆದು, ವಾದಿಯು, ಶ್ರೀ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ ಇವರನ್ನು ಮದುವೆಯಾಗುವುದಕ್ಕಿಂತ ಮುಂಚೆಯೇ 2005-06 ರಲ್ಲಿ ಹಿರಿಯ ಮಗನಾದ್ದರಿಂದ ಸದರಿಯವರ ಹೆಸರಿನಲ್ಲಿ ವ್ಯಾಜ್ಯದ ಜಮೀನುಗಳನ್ನು ಖರೀದಿಸಲಾಗಿತ್ತು. ಆದರೆ, ಸದರಿಯವರು ವಿವಾಹವಾದ ನಂತರ ಪ್ರತಿವಾದಿಯಾದ ತನ್ನ ಕುಟುಂಬದಿಂದ ಪ್ರತ್ಯೇಕವಾಗಿ ವಾಸ ಮಾಡಲು ಆರಂಭಿಸಿದ ಹಿನ್ನಲೆಯಲ್ಲಿ ಮುಂದೆ ತೊಂದರೆಯಾಗಬಹುದೆಂಬ ಉದ್ದೇಶದಿಂದ ವಾದಿ ಹಾಗೂ ಇವರ ಪತಿ ಶ್ರೀ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ ಇವರಿಂದ ಪ್ರತ್ಯೇಕವಾಗಿ ಎರಡು ಒಪ್ಪಿಗೆ ಪತ್ರಗಳನ್ನು ದಿನಾಂಕ: 11.09.2008 ರಂದು ಹಿರಿಯರ ಸಮಕ್ಷಮದಲ್ಲಿ ಪ್ರತಿವಾದಿಯಾದ ತನಗೆ ಹಾಗೂ ತನ್ನ ಮಕ್ಕಳ ಹೆಸರಿನಲ್ಲಿ ಬರೆದುಕೊಟ್ಟಿದ್ದು, ಸದರಿ ಒಪ್ಪಿಗೆ ಪತ್ರಗಳು ಪ್ರಸ್ತುತ ಹಕ್ಕುಬದಲಾವಣೆ ಕೋರಿರುವ ವ್ಯಾಜ್ಯದ ಜಮೀನುಗಳಾಗಿದ್ದು, ಈ ಜಮೀನುಗಳು ಜಂಟಿ ಕುಟುಂಬದ ಆಸ್ತಿಗಳೆಂದು ತೋರಿಸುವ ಪೂರಕ ದಾಖಲೆಯಾಗಿವೆಯೆಂದು ತಿಳಿಸಿರುತ್ತಾರೆ.

ಕಾರಣ, ದಿನಾಂಕ: 11.09.2008 ರಂದು ವಾದಿಯು ತಾನು ಮಾನ ಒಪ್ಪಿ ಬರೆದುಕೊಟ್ಟ ಒಪ್ಪಿಗೆ ಪತ್ರದಲ್ಲಿ, ಎಲ್ಲಾ ಕಮಲಾಪುರ ಹಾಗೂ ಕಡ್ಡಿರಾಂಪುರದ ಗ್ರಾಮದ ಜಮೀನುಗಳು ಜಂಟಿ ಕುಟುಂಬದ ಆಸ್ತಿಗಳಾಗಿರುವುದರಿಂದ, ಹಿಂದು ವಾರಸು ಕಾಯ್ದೆ 1956 ರ ಕಲಂ 8(ಎ)ರ ಅಡಿಯಲ್ಲಿ ಹೇಳಿದಂತೆ ಯಾವುದೇ ಒಬ್ಬ ಹಿಂದು ವ್ಯಕ್ತಿ ತನ್ನ ಆಸ್ತಿಗಳ ಸಂಬಂಧ ಯಾವುದೇ ವ್ಯವಸ್ಥಾ ಪತ್ರ ಮಾಡದೇ ಮೃತಪಟ್ಟಲ್ಲಿ ಅಂತಹ ಆಸ್ತಿಗಳ ಮೊದಲನೇ ದರ್ಜೆಯ ವಾರಸುದಾರರಾದ ಮಗ, ವಿಧವಾ ಪತ್ನಿ ಹಾಗೂ ತಾಯಿ ಮಾತ್ರ ವಾರಸುದಾರರಾಗಿರುತ್ತಾರೆ.

ಆದುದರಿಂದ, ವಾದಿ ಮತ್ತು ಇವರ ಅಪ್ರಾಪ್ತ ಮಗ ಹಾಗೂ ಶ್ರೀ ಎಸ್.ಹೆಚ್.ಎಂ.ಶಿವಲಿಂಗಮೂರ್ತಿಯ ತಾಯಿ ಜಯಮಂಗಳಮ್ಮ ಮತ್ತು ಕುಟುಂಬದ ಕರ್ತ ಆಗಿರುವ ಇವರ ತಂದೆಯಾದ ಪ್ರತಿವಾದಿ ಶ್ರೀ ಶಿವಯ್ಯ ಇವರ ಹೆಸರಿಗೆ ಜಂಟಿ ಹಕ್ಕುಬದಲಾವಣೆ ಮಾಡುವಂತೆ ಕೋರಿರುತ್ತಾರೆ.

ಈ ಬಗ್ಗೆ ವಾದಿ ಮತ್ತು ಪ್ರತಿವಾದಿ ಸಲ್ಲಿಸಿರುವ ವಾದ-ಪ್ರತಿವಾದವನ್ನು ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ಕಮಲಾಪುರ ಗ್ರಾಮದ ವ್ಯಾಜ್ಯದ ಜಮೀನುಗಳ ಸ.ನಂ.407/ಎ/2 ವಿಸ್ತೀರ್ಣ: 00 ಎಕರೆ 40 ಸೆಂಟ್ಸ್; ಸ.ನಂ: 407/ಬಿ/1 ವಿಸ್ತೀರ್ಣ 01 ಎಕರೆ 00 ಸೆಂಟ್ಸ್ ಮತ್ತು ಸ.ನಂ: 408/ಬಿ ವಿಸ್ತೀರ್ಣ 00 ಎಕರೆ 84 ಸೆಂಟ್ಸ್ ಒಟ್ಟು ವಿಸ್ತೀರ್ಣ 02 ಎಕರೆ 24 ಸೆಂಟ್ಸ್‌ನ್ನು ನೋಂದಾಯಿತ ಕ್ರಯಪತ್ರದ ಸಂಖ್ಯೆ: 183/2006-07 ದಿನಾಂಕ: 15.04.2006 ರನ್ವಯ ಹಾಗೂ ಸ.ನಂ: 407/ಸಿ1ಎ ವಿಸ್ತೀರ್ಣ 03 ಎಕರೆ 63 ಸೆಂಟ್ಸ್ ಜಮೀನನ್ನು ನೋಂದಾಯಿತ ಕ್ರಯ ಪತ್ರ ಸಂಖ್ಯೆ: 184/2006-07 ದಿನಾಂಕ: 15.04.2006 ರನ್ವಯ ಒಟ್ಟು ನಾಲ್ಕು ಸರ್ವೆ ನಂಬರ್‌ಗಳ ಒಟ್ಟು ವಿಸ್ತೀರ್ಣ 05 ಎಕರೆ 87 ಸೆಂಟ್ಸ್ ಜಮೀನನ್ನು ವಾದಿಯ ಪತಿ

2. ವಾದಿಯು ವ್ಯಾಜ್ಯದ ಜಮೀನುಗಳ ಕ್ರಯದಾರರಾದ ಶ್ರೀ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ ಇವರ ಧರ್ಮಪತ್ನಿಯಾಗಿರುವುದು ಹಿಂದು ವಿವಾಹ ಕಾಯ್ದೆಯನ್ವಯ ನೋಂದಣಿಯಾಗಿರುವ ದಾಖಲೆಯಿಂದ ಕಂಡುಬಂದಿರುತ್ತದೆ.

3. ಕ್ರಯದಾರರಾದ ವಾದಿಯ ಪತಿ ಶ್ರೀ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ ಇವರು ದಿನಾಂಕ: 24.04.2016 ರಂದು ನಿಧನರಾಗಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಪಡೆದ ಮರಣ ಪ್ರಮಾಣ ಪತ್ರ ಸಲ್ಲಿಸಿರುವುದು ದಾಖಲೆಯಿಂದ ಕಂಡುಬಂದಿರುತ್ತದೆ.

4. ವಾದಿಯು ಸದರಿ ವ್ಯಾಜ್ಯದ ಜಮೀನುಗಳ ಕ್ರಯದಾರರ ಪತ್ನಿ ಎನ್ನುವ ಬಗ್ಗೆ ನಾಡಕಛೇರಿ, ಸಂಡೂರು ಇವರಿಂದ ದಿನಾಂಕ: 20.05.2016 ರಂದು ಪಡೆದ ವಂಶವೃಕ್ಷ ಸಲ್ಲಿಸಿರುವುದು ದಾಖಲೆಯಿಂದ ಕಂಡುಬಂದಿರುತ್ತದೆ.

5. ತದನಂತರ, ವಾದಿಯು ಕ್ರಯದಾರರ ಧರ್ಮಪತ್ನಿಯಾದ ಕಾರಣ ವ್ಯಾಜ್ಯದ ಜಮೀನುಗಳ ಹಕ್ಕುಬದಲಾವಣೆಗೆ ದಿನಾಂಕ: 25/26.05.2016 ರ ಮೂಲಕ ಅರ್ಜಿ ಸಲ್ಲಿಸಿರುವುದು ದಾಖಲೆಯಿಂದ ಕಂಡುಬಂದಿರುತ್ತದೆ.

6. ಏತನ್ ಮಧ್ಯೆ ಕ್ರಯದಾರರ ತಂದೆ ಹಾಗೂ ವಾದಿಯ ಮಾವನವರಾದ ಶ್ರೀ ಎಸ್.ಹೆಚ್.ಎಂ.ಶಿವಯ್ಯ ಇವರು ದಿನಾಂಕ: 31.05.2016 ರನ್ವಯ ವ್ಯಾಜ್ಯದ ಜಮೀನುಗಳಲ್ಲಿ ತಮಗೂ ಹಕ್ಕಿರುವುದರಿಂದ ವಾದಿಯ ಹೆಸರಿಗೆ ಹಕ್ಕುಬದಲಾವಣೆ ಮಾಡದಂತೆ ತಕರಾರು ಸಲ್ಲಿಸಿರುವುದು ದಾಖಲೆಯಿಂದ ಕಂಡುಬಂದಿರುತ್ತದೆ.

7. ಪ್ರತಿವಾದಿಯು ವ್ಯಾಜ್ಯದ ಜಮೀನುಗಳ ಕ್ರಯದಾರರಾದ ಶ್ರೀ ಎಸ್.ಹೆಚ್.ಎಂ. ಶಿವಲಿಂಗಮೂರ್ತಿ ಇವರು ತಮ್ಮ ಮಗನಾಗಿರುವುದರಿಂದ ವ್ಯಾಜ್ಯದ ಜಮೀನುಗಳನ್ನು ಹಿಂದೂ ವಾರಸ ಕಾಯ್ದೆ ಪ್ರಕಾರ ತಮಗೂ ಹಕ್ಕಿರುವುದರಿಂದ ವಾದಿ ಮತ್ತು ಪ್ರತಿವಾದಿಯಾದ ತಮ್ಮನ್ನು ಹಾಗೂ ತಮ್ಮ ಪತ್ನಿಯ ಹೆಸರನ್ನು ಒಳಗೊಂಡಂತೆ ಜಂಟಿಯಾಗಿ ಹಕ್ಕುಬದಲಾವಣೆ ಮಾಡುವಂತೆ ಕೋರಿ ಲಿಖಿತ ಪ್ರತಿವಾದ ಸಲ್ಲಿಸಿರುವುದು ದಾಖಲೆಯಿಂದ ಕಂಡುಬಂದಿರುತ್ತದೆ. ಆದರೆ, ವಾದಿಯು ಕ್ರಯದಾರರ ಪತ್ನಿಯಾಗಿರುವುದರಿಂದ, ನೇರವಾರಸುದಾರಳಾಗಿರುವುದು ಕಂಡುಬಂದಿರುತ್ತದೆ.

8. ವ್ಯಾಜ್ಯದ ಜಮೀನುಗಳನ್ನು ಒಟ್ಟು ಕುಟುಂಬದ ಆದಾಯದಿಂದ ಕ್ರಯಕ್ಕೆ ಪಡೆದಿರುವುದರಿಂದ ಜಂಟಿಯಾಗಿ ಹಕ್ಕುಬದಲಾವಣೆಗೆ ಕೋರಿ ಉಳಿದ ಮಕ್ಕಳ ಉದ್ಯೋಗದ ವಿವರಗಳನ್ನು ಸಲ್ಲಿಸಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ.

9. ಅದೇ ರೀತಿ ವ್ಯಾಜ್ಯದ ಜಮೀನುಗಳ ಕ್ರಯದಾರರಾದ ಶ್ರೀ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ ಇವರು ತಮ್ಮ ಮಗನೆನ್ನುವ ಬಗ್ಗೆ ಉಪ ತಹಶೀಲ್ದಾರರು, ಸಂಡೂರು ಇವರಿಂದ ದಿನಾಂಕ: 26.7.2016 ರಂದು ಪಡೆದ ಕುಟುಂಬ ವಂಶವೃಕ್ಷ ಸಲ್ಲಿಸಿರುವುದು ದಾಖಲೆಯಿಂದ ಕಂಡುಬಂದಿರುತ್ತದೆ.

10. ಜೊತೆಗೆ, ವಾದಿಯೂ ದಿನಾಂಕ: 11.09.2008 ರಂದು ಹಾಗೂ ವಾದಿಯ ಪತಿಯು ದಿನಾಂಕ:18.12.2006 ರಂದು ಇಬ್ಬರೂ ವ್ಯಾಜ್ಯದ ಜಮೀನುಗಳಿಗೆ ಸಂಬಂಧಿಸಿದಂತೆ ಜಂಟಿ ಕುಟುಂಬದ ಆಸ್ತಿಯಾಗಿರುವುದರಿಂದ ಸದರಿ ಆಸ್ತಿಗಳನ್ನು ಕುಟುಂಬದಲ್ಲಿ ಸಮಪಾಲು ಮಾಡಲು ಒಪ್ಪಿಗೆ ಸೂಚಿಸಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದು ದಾಖಲೆಯಿಂದ ಕಂಡುಬಂದಿರುತ್ತದೆ.

11. ಆದರೆ, ಸದರಿ ಒಪ್ಪಿಗೆ ಪತ್ರಗಳನ್ನು ಪರಿಶೀಲಿಸಲಾಗಿ ವಾದಿ ಹಾಗೂ ಪ್ರತಿವಾದಿ ಬೇರೆ ಬೇರೆ ದಿನಾಂಕಗಳಂದು ನೀಡಿದ್ದು, ನೋಂದಾಯಿತವಲ್ಲದ ದಾಖಲೆಯಾಗಿರುವುದು ಕಂಡುಬಂದಿರುತ್ತದೆ. ಜೊತೆಗೆ, ವಾದಿಯ ಪತಿ ನೀಡಿದ ಒಪ್ಪಿಗೆ ಪತ್ರದಲ್ಲಿ ಕಣ್ಣಿರಾಂಪುರ ಗ್ರಾಮದ ಜಮೀನು ಒಳಗೊಂಡಿರದೇ ಅಪೂರ್ಣ ಇರುವುದು ಕಂಡುಬಂದಿರುತ್ತದೆ.

ಕಾರಣ, ಪ್ರತಿವಾದಿ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ದಿನಾಂಕ: 11.09.2008 ಹಾಗೂ ದಿನಾಂಕ: 18.12.2006 ರಂದು ವಾದಿ ಮತ್ತು ವಾದಿಯ ಪತಿ ವ್ಯಾಜ್ಯದ ಜಮೀನುಗಳಿಗೆ ಸಂಬಂಧಿಸಿದಂತೆ ನೀಡಿರುವ ಒಪ್ಪಿಗೆ ಪತ್ರವು ನೋಂದಾಯಿತವಲ್ಲದ ದಾಖಲೆಯಾಗಿರುವುದರಿಂದ ಹಾಗೂ ವ್ಯಾಜ್ಯದ ಜಮೀನುಗಳನ್ನು ವಾದಿಯ ಪತಿ ವೈಯಕ್ತಿಕವಾಗಿ ನೋಂದಾಯಿತ ದಸ್ತಾವೇಜು ಸಂಖ್ಯೆ: 183/2006-07 ಹಾಗೂ 184/2006-07 ದಿನಾಂಕ: 15.04.2006 ರ ನೋಂದಾಯಿತ ಕ್ರಯ ಪತ್ರ ಸಲ್ಲಿಸಿರುವುದು ಕಂಡುಬಂದಿರುತ್ತದೆ.

ಜೊತೆಗೆ, ಕ್ರಯಕ್ಕೆ ಪಡೆದ ವಾದಿಯ ಪತಿಯು ದಿನಾಂಕ: 24.04.2016 ರಂದು ನಿಧನರಾಗಿರುವುದರಿಂದ ಹೊಸಪೇಟೆ ತಾಲೂಕು, ಕಮಲಾಪುರ ಗ್ರಾಮದ ಸ.ನಂ.407/ಎ/2 ವಿಸ್ತೀರ್ಣ: 00 ಎಕರೆ 40 ಸೆಂಟ್ಸ್; ಸ.ನಂ: 407/ಬಿ/1 ವಿಸ್ತೀರ್ಣ 01 ಎಕರೆ 00 ಸೆಂಟ್ಸ್; ಸ.ನಂ: 407/ಸಿ1ಎ ವಿಸ್ತೀರ್ಣ 03 ಎಕರೆ 63 ಸೆಂಟ್ಸ್ ಮತ್ತು ಸ.ನಂ: 408/ಬಿ ವಿಸ್ತೀರ್ಣ 00 ಎಕರೆ 84 ಸೆಂಟ್ಸ್ ಎಲ್ಲಾ ಜಮೀನುಗಳ ಒಟ್ಟು ವಿಸ್ತೀರ್ಣ 05 ಎಕರೆ 87 ಸೆಂಟ್ಸ್ ವ್ಯಾಜ್ಯದ ಜಮೀನುಗಳನ್ನು ನೇರವಾರಸುದಾರರಾದ ವಾದಿಯ ಹೆಸರಿಗೆ ಪೋತಿ ವಾರಸ ಪ್ರಕಾರ ಹಕ್ಕುಬದಲಾವಣೆ ಮಾಡಲು ಹಾಗೂ ಪ್ರತಿವಾದಿಯು ತಮ್ಮ ಹಕ್ಕಿನ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರಕಂಡುಕೊಳ್ಳಲು ಈ ಕೆಳಕಂಡ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇಲೆ ಸದರಿ ಪ್ರತಿವಾದಿಯ ತಕರಾರನ್ನು ವಜಾಗೊಳಿಸುತ್ತಾ, ಹೊಸಪೇಟೆ ತಾಲೂಕು, ಕಮಲಾಪುರ ಗ್ರಾಮದ ವ್ಯಾಜ್ಯದ ಜಮೀನುಗಳ ಸ.ನಂ.407/ಎ/2 ವಿಸ್ತೀರ್ಣ: 00 ಎಕರೆ 40 ಸೆಂಟ್ಸ್; ಸ.ನಂ: 407/ಬಿ/1 ವಿಸ್ತೀರ್ಣ 01 ಎಕರೆ 00 ಸೆಂಟ್ಸ್ ಮತ್ತು ಸ.ನಂ: 408/ಬಿ ವಿಸ್ತೀರ್ಣ 00 ಎಕರೆ 84 ಸೆಂಟ್ಸ್ ಒಟ್ಟು ವಿಸ್ತೀರ್ಣ 02 ಎಕರೆ 24 ಸೆಂಟ್ಸ್‌ನ್ನು ನೋಂದಾಯಿತ ಕ್ರಯಪತ್ರದ ಸಂಖ್ಯೆ: 183/2006-07 ದಿನಾಂಕ: 15.04.2006 ರನ್ವಯ ಹಾಗೂ ಸ.ನಂ: 407/ಸಿ1ಎ ವಿಸ್ತೀರ್ಣ 03 ಎಕರೆ 63 ಸೆಂಟ್ಸ್ ಜಮೀನನ್ನು ನೋಂದಾಯಿತ ಕ್ರಯ ಪತ್ರ ಸಂಖ್ಯೆ: 184/2006-07 ದಿನಾಂಕ: 15.04.2006 ರನ್ವಯ ಒಟ್ಟು ನಾಲ್ಕು ಸರ್ವೆ ನಂಬರ್‌ಗಳ ಒಟ್ಟು ವಿಸ್ತೀರ್ಣ 05 ಎಕರೆ 87 ಸೆಂಟ್ಸ್ ಜಮೀನನ್ನು ವಾದಿಯ ಪತಿ ವೈಯಕ್ತಿಕವಾಗಿ ಕ್ರಯಕ್ಕೆ ಪಡೆದಿರುವುದರಿಂದ ಹಾಗೂ ಕ್ರಯದಾರರು ದಿನಾಂಕ: 24.04.2016 ರಂದು ನಿಧನರಾಗಿರುವುದರಿಂದ ನೇರ ವಾರಸುದಾರರಾದ ವಾದಿಯ ಹೆಸರಿಗೆ ಪೋತಿ ವಾರಸ ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ ಹಾಗೂ ಪ್ರತಿವಾದಿಯು ತಮ್ಮ ಹಕ್ಕಿನ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ತಿಳಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈದಿನ ದಿನಾಂಕ:20.10.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಉಪತಹಶೀಲ್ದಾರರು,<br>
ನಾಡಕಛೇರಿ, ಕಮಲಾಪುರ.<br>
ಹೊಸಪೇಟೆ ತಾಲೂಕು.

ಪ್ರತಿಯನ್ನು:-

1]ವಾದಿಯಾದ ಶ್ರೀಮತಿ ಎಸ್.ಹೆಚ್.ಎಂ.ಹೇಮಾವತಿ ಗಂಡ ಎಸ್.ಹೆಚ್.ಎಂ.ಶಿವಲಿಂಗಮೂರ್ತಿ, ವಾಸ: ಸ್ಮಯೋರ್ ಕಾಲೋನಿ, ಸಂಡೂರು, ತಾ: ಸಂಡೂರು, ಜಿ: ಬಳ್ಳಾರಿ, ಇವರಿಗೆ ಕಳುಹಿಸಲಾಗಿದೆ.

2]ಪ್ರತಿವಾದಿಯಾದ ಶ್ರೀ ಎಸ್.ಹೆಚ್.ಎಂ.ಶಿವಯ್ಯ, ಬಸವೇಶ್ವರ ನಿಲಯ, ಮನೆ ನಂ: 695, 18ನೇ ವಾರ್ಡ್, ಸ್ಮಯೋರ್ ಕಾಲೋನಿ, ಸಂಡೂರು, ತಾ: ಸಂಡೂರು, ಜಿ: ಬಳ್ಳಾರಿ, ಇವರಿಗೆ ಕಳುಹಿಸಲಾಗಿದೆ.

4]ಭೂಮಿಕೇಂದ್ರ, ತಾಲೂಕು ಕಛೇರಿ, ಹೊಸಪೇಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

5]ಕಂದಾಯ ನಿರೀಕ್ಷಕರು, ಕಮಲಾಪುರ ಹೋಬಳಿ, ಕಮಲಾಪುರ, ತಾ: ಹೊಸಪೇಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ.

5]ಕಛೇರಿ ಕಡತಕ್ಕೆ.